## ನಾಂದಿಪದ

# ಸಾಲುದೀಪಗಳ ನೆನಪು–ಹೊಳಪು



ಕಲೆ: ಜಬೀವುಲ್ಲಾ ಎಂ. ಅಸದ್

**ರಾಜೀವ** ತಾರಾನಾಥ, ನಿರಂಜನ, ಬೇಂದ್ರೆ – 'ಜ್ಞಾಪಕ ಚಿತ್ರಶಾಲೆ'ಯನ್ನು ನೆನಪಿಸುವಂತಿರುವ ಬರಹಗಳು ಈ ಸಂಚಿಕೆಯ ವಿಶೇಷ. ಸರೋದ್ ಅಲೆಗಳ ಮೂಲಕ ವಿಶ್ವದ ನಾದಪ್ರಿಯರ ಅಭಿಮಾನದಲೆಗಳ ಮೇಲೆ ವಿಹರಿಸಿದ ರಾಜೀವರು, ತಮ್ಮ ಚಿಂತನೆಗಳ ಮೂಲಕ ಕನ್ನಡ ಸಾಹಿತ್ಯಲೋಕದಲ್ಲೂ ಮಾನ್ಯರು. ತೊಂಬತ್ತೆರಡು ವರ್ಷಗಳ ಸಾರ್ಥಕ ಜೀವನ ನಡೆಸಿದ ಈ ಮಹಾನ್ ಸಾಧಕನ ವ್ಯಕ್ತಿತ್ವ–ಸಾಧನೆಯನ್ನು ಚಿತ್ರಿಸುವ ಎರಡು ಬರಹಗಳು ಈ ಸಂಚಿಕೆಯಲ್ಲಿವೆ. ಶತಮಾನೋತ್ಸವ ಸಂದರ್ಭದಲ್ಲಿ ನಿರಂಜನರನ್ನು ನೆನಪಿಸಿಕೊಳ್ಳುವ ಬರಹವೂ ಈ ಸಂಚಿಕೆಯಲ್ಲಿದೆ. ಪ್ರಗತಿಶೀಲ ಪಂಥದ ಮುಂದಾಳಾಗಿದ್ದ ನಿರಂಜನ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಮಹತ್ವದ್ದು. ನೆನಪು ಹಾಗೂ ಭಾವುಕತೆಯನ್ನು ಆಧರಿಸಿರುವ ನಿರಂಜನರನ್ನು ಕುರಿತ ಆರ್ದ್ರ ಬರಹ ಹೊಸ ತಲೆಮಾರಿಗೆ ಅವರನ್ನು ನೆನಪಿಸುವ ಪ್ರಯತ್ನವಾಗಿದೆ. ಬೇಂದ್ರೆಯವರ 'ಮಾಯಾಕಿನ್ನರಿ' ಕವಿತೆಯನ್ನು ಕುರಿತ ವಿಶ್ಲೇಷಣೆ, ಕವಿತೆಯೊಂದರ ಮೂಲಕ ಕನ್ನಡದ ಮುಖ್ಯ ಕವಿಯೊಬ್ಬರ ಕಾವ್ಯಯಾನವನ್ನು ಗುರ್ತಿಸುವ ವಿಶಿಷ್ಟ ಪ್ರಯತ್ನವಾಗಿದೆ. ಒಡಿಸ್ಸಿ ಮತ್ತು ಭರತನಾಟ್ಯ ನೃತ್ಯಕಲಾವಿದೆ ಸೋನಲ್ ಮಾನ್‌ಸಿಂಗ್‌ರ ವಿಶೇಷ ಸಂದರ್ಶನ ಈ ಸಂಚಿಕೆಯ ಮತ್ತೊಂದು ವಿಶೇಷ.

ಸಮಕಾಲೀನ ಕಥೆಗಳಲ್ಲಿ ಅತ್ಯುತ್ತಮವಾದುದನ್ನು ಹೆಕ್ಕಿ ಪ್ರಕಟಿಸುವುದರಲ್ಲಿ ಮುಂಚೂಣಿಯಲ್ಲಿರುವ 'ಮಯೂರ', ಈ ಬಾರಿಯೂ ಒಳ್ಳೆಯ ಕಥನಗಳನ್ನು ಆಯ್ದುತಂದಿದೆ. ಹಿರಿಯರೊಂದಿಗೆ ಈ ಹೊತ್ತಿನ ಗಮನಾರ್ಹ ಬರಹಗಾರರ ಕಥೆಗಳು ಸಂಕಲನಗೊಂಡಿವೆ. ಈ ಕಥೆಗಳು 'ಮಯೂರ'ದ ಆಗಸ್ಟ್ ಸಂಚಿಕೆಯ ಸಮೃದ್ಧಿಯನ್ನು ಹೆಚ್ಚಿಸಿವೆ ಎನ್ನುವ ನಂಬುಗೆ ನಮ್ಮದು.

ಮಯೂರ ಬಳಗ
editormy@mayura.co.in